ನಡೆಯುತ್ತಿದ್ದ ಸಂಗೀತೋತ್ಸವಗಳಲ್ಲಿ ಪಾಶ್ಚಾತ್ಯ ಸಂಗೀತ ಕಾರ್ಯಕ್ರಮಗಳನ್ನೂ ಕೇಳುತ್ತಿದ್ದರು. ಈ ಮುಕ್ತ ಶ್ರವಣ ಸಂಸ್ಕಾರವೇ ಅವರ ಕೈಹಿಡಿಯಿತು.

ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಬೆಂಗಳೂರಿಗೆ ಬಂದ ಮೇಲೆ ರಾಜನ್ ಸಂಗೀತಾಸಕ್ತಿಗೆ ಹೊಸ ದೆಸೆ ಸಿಕ್ಕಿತು. ಅಲ್ಲಿ ಅವರು ವಯಲಿನ್ ಅನ್ನು ಶಾಸ್ತ್ರೀಯವಾಗಿ ಅಭ್ಯಸಿಸಿದ್ದಲ್ಲದೇ ರಾಜ್ಯಮಟ್ಟದ ಸಂಗೀತ ಸ್ಪರ್ಧೆಯಲ್ಲಿ ವಯಲಿನ್ ನುಡಿಸಿ ಮೊದಲ ಬಹುಮಾನವನ್ನೂ ಪಡೆದರು.

ಹಿರಿಯಣ್ಣನಾಗಿದ್ದ ರಾಜನ್ ತಾವು ಹೋದಲ್ಲೆಲ್ಲ ತಮ್ಮ ಸಹೋದರ ನಾಗೇಂದ್ರ ಅವರನ್ನು ಕೈ ಹಿಡಿದು ಕರೆದುಕೊಂಡು ಹೋದರು; ಹಿರಿಯನೊಬ್ಬ ಸಂತೆಯಲ್ಲಿ ತಾನು ಎರಡು ಹೆಜ್ಜೆ ಮುಂದಿದ್ದು, ಕಿರಿಯನನ್ನು ಕೈ ಹಿಡಿದು ಕರೆದುಕೊಂಡು ಹೋದ ಹಾಗೆ. ಬೆಂಗಳೂರಿನ ಜಯಮಾರುತಿ ಆರ್ಕೆಸ್ಟ್ರಾದಲ್ಲಿ ಕೆಲಸ ಮಾಡುವಾಗ, ನಂತರ ಮದ್ರಾಸಿಗೆ ಹೋಗುವ ಅವಕಾಶ ಸಿಕ್ಕಾಗೆಲ್ಲವೂ ಅವರ ಜೊತೆಯಲ್ಲಿ ನಾಗೇಂದ್ರ ಅವರನ್ನೂ ಕರೆದುಕೊಂಡು ಹೋದರು. ಹೀಗೆ ಅಣ್ಣನ ಹಿಂದೆಯೇ ಹೋಗುತ್ತಿದ್ದ ತಮ್ಮ ನಾಗೇಂದ್ರ, 2000ರಲ್ಲಿ ಅಣ್ಣನನ್ನು ದಾಟಿ ಬದುಕು ಮುಗಿಸಿ ಹೊರಟುಬಿಟ್ಟರು.

ತಮ್ಮ ಸ್ವರಲೋಕದ ಭಾಗವಾಗಿದ್ದ ತಮ್ಮ ತೀರಿಹೋದಮೇಲೆ ರಾಜನ್ ಒಂಟಿಯಾದರು. ಆದರೆ ಸಂಗೀತ ಬಿಟ್ಟರೆ ಅವರಿಗೆ ಬೇರೆ ಜಗತ್ತಿರಲಿಲ್ಲ. ಹಾಗಾಗಿ ನಂತರವೂ ತಮ್ಮ ಮಗ ಆರ್. ಅನಂತ್ ಕುಮಾರ್ ಅವರ ಜೊತೆಗೆ ಕೆಲಸ ಮಾಡಿದರು. ಈ ಕಾಲದಲ್ಲಿಯೇ 'ಹಾಡೋ ಸುಸ್ವರ ಸಂಗೀತ' ಎಂಬ ಪುಸ್ತಕವನ್ನೂ ಬರೆದರು. 'ಸಪ್ತಸ್ವರಾಂಜಲಿ' ಎಂಬ ಸಂಸ್ಥೆ ಕಟ್ಟಿಕೊಂಡು ಯುವ ಗಾಯಕರಿಗೆ ಮಾರ್ಗದರ್ಶನ ಮಾಡಲು ಮುಂದಾದರು. ಆದರೆ ಈ ಎಲ್ಲ ಕೆಲಸದಲ್ಲಿಯೂ ಅವರ ಪಕ್ಕದ ಒಂದು ಜಾಗ ಶೂನ್ಯವಾಗಿರುವಂತೆ ಭಾಸವಾಗುತ್ತಿತ್ತು. ಪಲ್ಲವಿಯನ್ನು ಕಳೆದುಕೊಂಡ ಪದ್ಯದ ಚರಣದಂತೆ ಕಾಣಿಸುತ್ತಿದ್ದರು.

ಹತ್ತು ವರ್ಷಗಳ ಒಂಟಿನಡಿಗೆ ಸಾಕಾಗಿ ಈಗ ರಾಜನ್ ಕೂಡ ನಾಗೇಂದ್ರ ಅವರ ದಾರಿ ತುಳಿದಿದ್ದಾರೆ. ಅಲ್ಲಿಗೆ ನಾಲ್ಕು ದಶಕಗಳ ಕಾಲ ಚಿತ್ರಸಂಗೀತದ ಜಗತ್ತಿನಲ್ಲಿ ಕನ್ನಡ, ತೆಲುಗು ತಮಿಳು ಭಾಷೆಗಳಲ್ಲಿ ಮೆರೆದಿದ್ದ ಸಹೋದರರ ಇಹಲೋಕದ ವ್ಯಾಪಾರ ಮುಗಿದಂತಾಗಿದೆ. ಅವರು ಬಿತ್ತಿ ಹೋದ ಹಾಡುಗಳು ಮಾತ್ರ ಇಂದಿಗೂ ಅನಂತ ಅಭಿಮಾನಿಗಳ ಹೃದಯದಲ್ಲಿ ಮೊಳೆಯುತ್ತಲೇ ಇವೆ.

ನಮ್ಮ ದಿನವನ್ನು ಸುಂದರವಾಗಿಡಲು ಒಂದು ಹಾಡು ಸಾಕು. ಜಂಜಡದ ನಿತ್ರಾಣವನ್ನು ಕ್ಷಣಮಾತ್ರದಲ್ಲಿ ನಿವಾರಿಸಬಲ್ಲ, ನೂರಾರು ಹಾಡುಗಳ ಮುಗಿಯದ ಮುಲಾಮು ಕೊಟ್ಟು ಹೋದ ಇವರಿಗೆ ಹೇಗೆ ಕೃತಜ್ಞತೆ ಹೇಳುವುದು? ಅವರದೇ ಸಂಗೀತ ಸಂಯೋಜನೆಯ 'ಪಾವನ ಗಂಗಾ' ಸಿನಿಮಾದ ಈ ಹಾಡುಗಳ ಸಾಲೇ ಸಾಕು: ಆಕಾಶ ದೀಪವು ನೀನು/ ನಿನ್ನ ಕಂಡಾಗ ಸಂತೋಷವೇನು/ ಆ ನೋಟದಲ್ಲೇ ಹಿತವೇನು/ ಮರೆಯಾದಾಗ ನೋವೇನು... ■



# ಸೂಪರ್ ಹೀರೊಯಿನ್ ಆದಿತಿ!

ಸೂಪರ್ ಹೀರೊ ಪರಿಕಲ್ಪನೆ ಸಿನಿಮಾಗಳಿಗೆ ಹೊಸದಲ್ಲ. ಇಂಗ್ಲಿಷಿನಲ್ಲಿಯಂತೂ ಸೂಪರ್ ಹೀರೊಗಳ ಸಾಲು ಸಾಲು ಚಿತ್ರಗಳು ಸಾಕಷ್ಟು ಹಿಟ್ ಆಗಿವೆ. ಕನ್ನಡದ ಬಹುತೇಕ ಮಾಸ್ ಸಿನಿಮಾಗಳಲ್ಲಿ, ಸ್ಟಾರ್ ನಟರು ಸೂಪರ್ ಹೀರೊಗಳನ್ನು ಮೈಮೇಲೆ ಆವಾಹಿಸಿಕೊಳ್ಳುವುದನ್ನೂ ನೋಡಿದ್ದೇವೆ. ಆದರೆ ಈಗ ಸೂಪರ್ ಹೀರೊಗಳಿಗೆ ಸೆಡ್ಡು ಹೊಡೆಯಲು ಸೂಪರ್ ಹೀರೊಯಿನ್ ಬರ್ತಿದ್ದಾರೆ.

ಸೂಪರ್ ಹೀರೊಯಿನ್ ಪರಿಕಲ್ಪನೆಯನ್ನು ಇಟ್ಟುಕೊಂಡು ಸಿನಿಮಾ ಮಾಡಲು ಹೊರಟಿರುವವರು ಮನೋಜ್ ಪಿ. ನಡಲುಮನೆ. ಅವರು ಇದನ್ನು ಫೀಮೇಲ್ ಸೂಪರ್ ಹೀರೊ ಸಿನಿಮಾ ಎಂದು ಕರೆದುಕೊಂಡಿದ್ದಾರೆ. ಹಾ, ಈ ಚಿತ್ರದಲ್ಲಿ ಸೂಪರ್ ಹೀರೊಯಿನ್ ಆಗಿ ಕಾಣಿಸಿಕೊಳ್ಳುತ್ತಿರುವವರು ಅದಿತಿ ಪ್ರಭುದೇವ. ನಿರ್ದೇಶಕ ಮನೋಜ್ ಅವರಿಗೆ ಇದು ನಿರ್ದೇಶನದ ಮೊದಲ ಅನುಭವ. ಅವರೂ ಸೂಪರ್ ಡೈರೆಕ್ಟರ್ ಆಗುತ್ತಾರಾ ಎಂದು ಕಾದುನೋಡಬೇಕು.

'ಕನ್ನಡದಲ್ಲಿ ಇದುವರೆಗೆ ಯಾರೂ ಇಂಥ ಪರಿಕಲ್ಪನೆ ಇಟ್ಟುಕೊಂಡು ಸಿನಿಮಾ ಮಾಡಿಲ್ಲ. ತಾಂತ್ರಿಕವಾಗಿಯೂ ಅದ್ದೂರಿತನದಲ್ಲಿಯೂ ಇದು ಹಾಲಿವುಡ್ ಶೈಲಿಯ ಸಿನಿಮಾಗಳಿಗೆ ಸೆಡ್ಡು ಹೊಡೆಯುತ್ತದೆ' ಎಂದು ಹೇಳಿಕೊಳ್ಳುತ್ತಿದೆ ಚಿತ್ರತಂಡ. ಪೂಜಾ ವಸಂತ್ ಕುಮಾರ್ ಈ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ.

ವಿಶೇಷವೆಂದರೆ ಇದು ಲಾಕ್‌ಡೌನ್ ಸಮಯದಲ್ಲಿಯೇ ಸಿದ್ಧಗೊಂಡ ಕಥೆ. ಚಿತ್ರೀಕರಣಕ್ಕೆ ಅವಕಾಶ ಕೊಡುತ್ತಿದ್ದ ಹಾಗೆಯೇ ಬೆಂಗಳೂರಿನ ಸುತ್ತಮುತ್ತಲಿನ ಜಾಗಗಳಲ್ಲಿ ಮೂವತ್ತು ದಿನಗಳ ಚಿತ್ರೀಕರಣವನ್ನು ತಂಡ ಮುಗಿಸಿಕೊಂಡಿದೆ. ಕ್ಲೈಮ್ಯಾಕ್ಸ್ ಚಿತ್ರೀಕರಣವೊಂದು ಮುಗಿದರೆ ಪೋಸ್ಟ್ ಪ್ರೊಡಕ್ಷನ್ ಹಂತಕ್ಕೆ ಹೋಗಲಿದೆ. ■